ಕರ್ನಾಟಕ ಪರೀಕ್ಷಾ ಪ್ರಾಧಿಕಾರ
KARNATAKA EXAMINATIONS AUTHORITY
KEA

ಸಂಖ್ಯೆ: ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/2017 ದಿನಾಂಕ: 27-03-2017

### ಪತ್ರಿಕಾ ಪ್ರಕಟಣೆ- ವಿಕಸನ – ದೂರದರ್ಶನದ ಚಂದನ ವಾಹಿನಿಯಲ್ಲಿ ವಿಕಸನ ಪ್ರಸಾರ

2017-18ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗೆ ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ-2017ಅನ್ನು, ಸರ್ಕಾರದ ನಿರ್ದೇಶನದಂತೆ ದಿನಾಂಕ 02-05-2017 ಮತ್ತು 03-05-2017 ರಂದು ನಡೆಸಲಾಗುವುದು. ವಿದ್ಯಾರ್ಥಿ ಸಮುದಾಯದ ಅನುಕೂಲಕ್ಕಾಗಿ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸಿಇಟಿ-2017ರ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲು ನುರಿತ ಶೈಕ್ಷಣಿಕ ತಜ್ಞರಿಂದ ದೂರದರ್ಶನದ ಚಂದನ ವಾಹಿನಿಯಲ್ಲಿ ವಿಕಸನ (**ವಿ**ದ್ಯಾರ್ಥಿಗಳ **ಕ**ನಸನ್ನು **ಸ**ಮರ್ಥವಾಗಿ **ನ**ನಸಾಗಿಸಲು ತರಬೇತಿ ಕಾರ್ಯಕ್ರಮ) ವಿಶೇಷ ತರಬೇತಿ ಕಾರ್ಯಕ್ರಮವನ್ನು ಪ್ರಾಧಿಕಾರವು ಏರ್ಪಡಿಸಿದೆ.

ವಿಕಸನ ಕಾರ್ಯಕ್ರಮವನ್ನು ದಿನಾಂಕ 01-04-2017 ರಿಂದ 30-04-2017 ರ ವರೆಗೆ, ಪ್ರತಿದಿನ ಎರಡು ಕಂತುಗಳಲ್ಲಿ ಬೆ. 6.45 ರಿಂದ 7.45ರ ವರೆಗೆ ಮತ್ತು ರಾ. 10.30 ರಿಂದ 11.30ರ ವರೆಗೆ ಪ್ರಸಾರವನ್ನು ಮಾಡಲು ಉದ್ದೇಶಿಸಿದೆ. ಈ ಕಾರ್ಯಕ್ರಮದಲ್ಲಿ ಪ್ರತಿದಿನ ಪ್ರಸಾರವಾಗುವ ಕಾರ್ಯಕ್ರಮದ ವಿವರ, ಕಾರ್ಯಕ್ರಮದ ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ನೀಡಲಾಗಿದೆ.

ವಿದ್ಯಾರ್ಥಿಗಳಿಗೋಸ್ಕರವಾಗಿ ದೂರದರ್ಶನದಲ್ಲಿ ಈ ಕಾರ್ಯಕ್ರಮವನ್ನು ಪ್ರಸಾರ ಮಾಡುತ್ತಿರುವುದರಿಂದ ಕಾರ್ಯಕ್ರಮದ ಪ್ರಸಾರದ ವಿವರಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಮ್ಮ ಪತ್ರಿಕೆಯ ಎಲ್ಲಾ ಆವೃತ್ತಿಗಳಲ್ಲಿ ಪ್ರಕಟಿಸುವಂತೆ ಕೋರಿದೆ.

### Press Note - **VI-KA-SA-NA – On Doordarshan Chandana Channel**

As per the directions of the Government, KEA is conducting the CET-2017 on 02-05-2017 and 03-05-2017 for admission to various Professional Courses. In order to benefit student community, especially for Rural students to get prepared for CET-2017, **"VI-KA-SA-NA"** (ವಿದ್ಯಾರ್ಥಿಗಳ ಕನಸನ್ನು ಸಮರ್ಥವಾಗಿ ನನಸಾಗಿಸಲು) – capacity building programme from the subject experts, is organized by Karnataka Examinations Authority which will be beamed through Doordarshan Chandana Channel.

The programme will be telecasted from 01-04-2017 to 30-04-017 in two sessions from 6.45 am to 7.45 am and from 10.30 pm to 11.30 pm. The details of programme and time table is hosted on the KEA Website http://kea.kar.nic.in for the information of the candidates.

As this programme is for the benefit of students we request you to publish the timings and timetable prominently in your newspaper in all editions for the benefit of the student community.

27/3/17
ಕಾರ್ಯನಿರ್ವಾಹಕ ನಿರ್ದೇಶಕರು.

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.**
18th Cross, Sampige Road, Malleshwaram, Bangalore – 560 012.
Phone: 080-2356 4583, 2336 1786, Fax: 080-2346 1576
Website : http://kea.kar.nic.in e-mail : keauthority-ka@nic.in